**ಚಂದ್ರಕಾಂತ ಪೋಕಳೆ**

ನಿವೃತ್ತ ಕನ್ನಡ ಅಧ್ಯಾಪಕ ಪೋಕಳೆಯವರು ಮರಾಠಿ ಕೃತಿಗಳ ಕನ್ನಡ ಅನುವಾದಗಳಿಂದ ಪರಿಚಿತರು. 100ಕ್ಕೂ ಹೆಚ್ಚು ಮರಾಠಿ ಕೃತಿಗಳನ್ನು ಅವರು ಕನ್ನಡಕ್ಕೆ ಅನುವಾದಿಸಿದ್ದಾರೆ. ಆತ್ಮಕಥೆ 'ಉಚಲ್ಯಾ', ಕಾದಂಬರಿಗಳಾದ 'ಚಕ್ರ', 'ಮಹಾನಾಯಕ', 'ಪಾಂಗೀರಾ', 'ಹೇ ಈಶ್ವರ ರಾವ್ – ಹೇ ಪುರುಷೋತ್ತಮರಾವ್' ಅವರ ಕೆಲವು ಅನುವಾದಿತ ಕೃತಿಗಳಾಗಿವೆ. ಬೆಳಗಾವಿಯಲ್ಲಿ ನೆಲೆಸಿದ್ದಾರೆ.



◆ **ದಲಿತ ಸಾಹಿತ್ಯ ಎಂಬ ಹಣೆಪಟ್ಟಿ ಬೇಕೇ? ಇದು ಜಾತಿ ಸೂಚಕ ಎಂದೆನಿಸುವುದಿಲ್ಲವೇ?**

ದಲಿತ ಸಾಹಿತ್ಯವು ಭಿನ್ನ ಸಾಹಿತ್ಯವಾಗಿದೆ. ಈ ಸಾಹಿತ್ಯದ ಭಾಷೆ, ವಿಷಯ, ಆಲೋಚನೆಯು ಭಿನ್ನವಾಗಿದೆ. ಅವನು ಅಗಸೆಯ ಹೊರಗೆ ವಾಸಿಸುತ್ತಾನೆ. ಸವರ್ಣೀಯರ ವಸತಿಯಲ್ಲಿ ಅವರಿಗೆ ಸ್ಥಾನವಿಲ್ಲ. ನೀರು ಸಿಗುವುದಿಲ್ಲ. ಮಂದಿರದೊಳಗೆ ಪ್ರವೇಶವಿಲ್ಲ. ಎಲ್ಲಿಯವರೆಗೂ ಈ ಸಾಮಾಜಿಕ ಭೇದ–ಭಾವವಿರುವುದೋ ಅಲ್ಲಿಯವರೆಗೂ ದಲಿತ ಸಾಹಿತ್ಯ ಬೇರೆಯೇ ಆಗಿರುತ್ತದೆ.

◆ **ಇಂದು ದಲಿತ ಸಾಹಿತ್ಯದ ತೀವ್ರತೆ ಕಡಿಮೆಯಾಗಿದೆಯೆ?**

ಇಲ್ಲ, ದಲಿತ ಸಾಹಿತ್ಯದ ತೀವ್ರತೆ ಕಡಿಮೆಯಾಗಲಿಲ್ಲ. ದಲಿತ ಸಾಹಿತ್ಯದ ಪ್ರಶ್ನೆ ಗಂಭೀರವಾಗಿದೆ. ದಲಿತರು ಅದರ ವಿರುದ್ಧ ಬರೆಯುತ್ತಾರೆ. ಆರಂಭದಲ್ಲಿ ದಲಿತ ಸಾಹಿತ್ಯದಲ್ಲಿ ಬಯ್ಗುಳು ಅಧಿಕವಾಗಿರುತ್ತಿತ್ತು. ಈಗ ದಲಿತ ಲೇಖಕ ಪ್ರಬುದ್ಧನಾಗಿದ್ದಾನೆ. ಹೀಗಾಗಿ ಸಾಹಿತ್ಯದಲ್ಲಿ ಆಶಯವು ಪ್ರಭಾವಶಾಲಿಯಾಗಿ ವ್ಯಕ್ತವಾಗುತ್ತಲಿದೆ.

◆ **ಯುವ ದಲಿತ ಲೇಖಕರು ಬರೆಯುವಾಗ ಯಾವ ವಿಷಯವನ್ನು ಆಯ್ಕೆ ಮಾಡಿಕೊಳ್ಳಬೇಕು?**

ಪ್ರತಿಯೊಬ್ಬ ದಲಿತ ಲೇಖಕನಿಗೆ ದಲಿತರ ಸಮಸ್ಯೆಗಳ ಬಗೆಗೆ ಬರೆಯಬೇಕೆಂದೆನಿಸುತ್ತದೆ. ಕೆಲವು ದಲಿತ ಲೇಖಕರು ಬೇರೆ ವಿಷಯಯದ ಬಗೆಗೂ ಚೆನ್ನಾಗಿ ಬರೆಯುತ್ತಿದ್ದಾರೆ. ಜನರು ಓದುವುದಿಲ್ಲ. ಈ ಕಾರಣಕ್ಕಾಗಿ ಹೊಸ ಬರಹಗಾರರ ಬರವಣಿಗೆಯು ಚರ್ಚೆಯಾಗುತ್ತಿಲ್ಲ.

◆ **ಕನ್ನಡ ದಲಿತ ಲೇಖಕರ ಪ್ರಭಾವ ಮರಾಠಿ ದಲಿತ ಸಾಹಿತ್ಯದ ಮೇಲಾಗಿದೆಯೇ?**

ಕನ್ನಡ, ಮರಾಠಿ ಲಿಪಿ ಬೇರೆ ಬೇರೆ. ಹೀಗಾಗಿ ಓದುವುದು ಅಸಾಧ್ಯ. ಕನ್ನಡದಲ್ಲೂ ಮಹತ್ವದ ಲೇಖಕರಿದ್ದಾರೆ. ಅವರ ಕೃತಿಗಳು ಮರಾಠಿಗೆ ಭಾಷಾಂತರವಾಗಬೇಕು. ಅಂದಾಗ ಅವರ ಪ್ರಭಾವ ಮರಾಠಿ ದಲಿತ ಸಾಹಿತ್ಯದ ಮೇಲಾಗುವುದು ಸಾಧ್ಯ. ಎರಡು ನೆರೆ ಹೊರೆಯ ಭಾಷೆಗಳ ನಡುವೆ ಸಂವಾದ ಸಾಧ್ಯವಾಗುತ್ತಿಲ್ಲ. ●